# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 338 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ |
| ಉತ್ತರಿಸುವ ದಿನಾಂಕ | : | 07-07-2023 |
| ಉತ್ತರಿಸುವ ಸಚಿವರು | : | ಮಾನ್ಯ ಸಮಾಜ ಕಲ್ಯಾಣ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ನಗು-SMILE (Support for marginalized individual for lively hood and enterprise) ಯೋಜನೆಯನ್ನು ಎಷ್ಟು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ; (ಪೂರ್ಣ ವಿವರ ನೀಡುವುದು)</td><td>ಕೇಂದ್ರ ಸರ್ಕಾರದ ಪುರಸ್ಕೃತ ನಗು-SMILE (Support for marginalized individual for lively hood and enterprise) ಯೋಜನೆಯನ್ನು ಬೆಂಗಳೂರು ನಗರದಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿರುತ್ತದೆ.</td></tr>
<tr><td>ಆ)</td><td>ಈ ಯೋಜನೆಯ ಧ್ಯೇಯೋದ್ದೇಶಗಳು ಯಾವುವು; ಮತ್ತು ಯೋಜನೆ ಅಡಿಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು; ಅವುಗಳ ಸಾಧನೆ ಎಷ್ಟು; (ಪೂರ್ಣ ಮಾಹಿತಿ ನೀಡುವುದು)</td><td>ಸಮಾಜ ಕಲ್ಯಾಣ ಇಲಾಖೆಯ ಅಧೀನದ ಕೇಂದ್ರ ಪರಿಹಾರ ಸಮಿತಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಬೆಂಗಳೂರು ನಗರವನ್ನು ಭಿಕ್ಷುಕ ಮುಕ್ತ ನಗರವನ್ನಾಗಿಸಲು (Pilot Project) ಹಮ್ಮಿಕೊಂಡಿರುವ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಶೇ.100% ರಷ್ಟು ಅನುದಾನವೆಂದು ಹಾಗೂ ಅವುಗಳ ವೆಚ್ಚ ಬಾಕಿ ವಿವರ.<br>(ರೂ.ಲಕ್ಷಗಳಲ್ಲಿ)
<table>
<tr><th>ಕ್ರ. ಸಂ</th><th>ಮಾರ್ಗಸೂಚಿ ವಿವರ</th><th colspan="2">ಅನುದಾನದ ಶೇಕಡವಾರು</th><th>ಅನುದಾನ ಬಿಡುಗಡೆ</th><th>ವೆಚ್ಚ</th><th>ಉಳಿಕೆ</th></tr>
<tr><td>1</td><td>Vertical-1 (survey/ Identification)</td><td>5%</td><td>20.00</td><td rowspan="5">200.00</td><td rowspan="5">188.67</td><td rowspan="5">1.36</td></tr>
<tr><td>2</td><td>Vertical-2 ( Mobilization)</td><td>5%</td><td>20.00</td></tr>
<tr><td>3</td><td>Vertical-3 (Rescue/Shelter Homes)</td><td>39%</td><td>156.00</td></tr>
<tr><td>4</td><td>Vertical-4- (Complete Resettlement)</td><td>49%</td><td>196.00</td></tr>
<tr><td>5</td><td>Administrative cost</td><td>2%</td><td>08.00</td></tr>
<tr><td></td><td>ಒಟ್ಟು</td><td>100%</td><td>400.00</td><td>200.00</td><td>188.67</td><td>1.36</td></tr>
</table>
ಪ್ರಸ್ತುತ Vertical-1 ರಂತೆ ಭಿಕ್ಷುಕರ ಸಮೀಕ್ಷೆ ಮತ್ತು ಗುರುತಿಸುವಿಕೆ ಕಾರ್ಯವನ್ನು ನಿರ್ದೇಶಕರು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ, ನಾಗರಭಾವಿ, ಬೆಂಗಳೂರು-72 ಇವರಿಗೆ ವಹಿಸಲಾಗಿದೆ.</td></tr>
</table>

| | | |
|---|---|---|
| ಇ) | ರಾಜ್ಯಕ್ಕೆ ಈ ಯೋಜನೆ ಅಡಿ ಕೇಂದ್ರ ಸರ್ಕಾರದಿಂದ ದೊರೆತಿರುವ ಸವಲತ್ತುಗಳು ಯಾವುವು; ಈ ಸವಲತ್ತುಗಳನ್ನು ಬಳಸಿಕೊಂಡು ನಿಗಧಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಯನ್ನು ಸಾಧಿಸಲಾಗಿದೆಯೇ? (ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದಿಂದ ಸಮಾಜ ಕಲ್ಯಾಣ ಇಲಾಖೆ ಅಧೀನದ ಕೇಂದ್ರ ಪರಿಹಾರ ಸಮಿತಿಗೆ ಕೇಂದ್ರ ಸರ್ಕಾರದ ಪುರಸ್ಕೃತ ನಗು – SMILE (Support for marginalized individual for lively hood and enterprise) ಯೋಜನೆಯಡಿ ಬೆಂಗಳೂರು ನಗರವನ್ನು ಭಿಕ್ಷುಕರ ಮುಕ್ತ ನಗರವನ್ನಾಗಿಸಲು ಒಟ್ಟು ರೂ.4.00ಕೋಟಿಗಳ ಅನುದಾನ ನಿಗದಿಪಡಿಸಿ, ಮೊದಲನೇ ಕಂತು ರೂ.2.00ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><br>ಸದರಿ ಯೋಜನೆಯಡಿ ದಿನಾಂಕ: 25-06-2023 ರ ಅಂತ್ಯಕ್ಕೆ 705 ಭಿಕ್ಷುಕರನ್ನು ಬಂಧಿಸಿ ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದ ರಕ್ಷಣೆಯಲ್ಲಿರಿಸಿ ಊಟ-ತಿಂಡಿ, ವಸತಿ, ಸಮವಸ್ತ್ರ, ಹಾಸಿಗೆ-ಹೊದಿಕೆ, ಔಷದೋಪಚಾರ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಮತ್ತು ವಿವಿದ ವೃತ್ತಿಗಳಲ್ಲಿ ತರಭೇತಿಗಳನ್ನು ನೀಡಲಾಗಿದ್ದು, ದಿನಗೂಲಿ ಭತ್ಯೆಯನ್ನು ಪಾವತಿಸಲಾಗುತ್ತಿದೆ.<br><br>ಸದರಿ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೊತ್ತಕ್ಕೆ ದಿನಾಂಕ:15-06-2023 ಕ್ಕೆ ರೂ.1,88,67,431/-ಗಳನ್ನು ವೆಚ್ಚ ಮಾಡಲಾಗಿರುತ್ತದೆ. ಎರಡನೇ ಕಂತಿನ ಅನುದಾನವನ್ನು ಕೇಂದ್ರ ಸರ್ಕಾರದಿಂದ ಬಿಡುಗಡೆ ನಿರೀಕ್ಷಿಸಲಾಗಿದೆ. |

**ಸಕಇ/19/ಎಸ್‌ಬಿಆರ್/2023**

**(ಡಾ.ಹೆಚ್.ಸಿ.ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.